# ಚೋಮನ ದುಡಿ ಕಾದಂಬರಿಯಲ್ಲಿ ಅಸ್ಪೃಶ್ಯತೆಯ ನೆಲೆಗಳು

# Chomana Dudi Kadambariyalli Asprusayateya Nelegalu

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ 1933ನೇ ಇಸವಿ ಬಹುಮುಖ್ಯವಾದ ವರ್ಷ. ಏಕೆಂದರೆ ಮೊದಲಿನಿಂದಲೂ ಸಾಹಿತ್ಯದಿಂದ ನಿರಾಕರಿಸಲ್ಪಟ್ಟ ಅಸ್ಪೃಶ್ಯರನ್ನು ಕುರಿತ ಮತ್ತು ಅಸ್ಪೃಶ್ಯರನ್ನೆಲ್ಲ ನಾಯಕರನ್ನಾಗಿಸಿ ಕೊಂಡ ಎರಡು ಕೃತಿಗಳು ರಚನೆಗೊಂಡವು.

1. ಡಾ. ಶಿವರಾಮ ಕಾರಂತರ 'ಚೋಮನ ದುಡಿ'
2. ಮುಲ್ಕರಾಜ್ ಆನಂದರ 'ಅನ್‌ಟಚಬಲ್' (Untouchable)

ಈ ಎರಡೂ ಕಾದಂಬರಿಗಳು ಈ ಶತಮಾನದ ಮೂರನೆ ದಶಕದ ಕೃತಿಗಳು. ಇವೆರಡಕ್ಕೂ ಪರಸ್ಪರ ಪ್ರಭಾವವಿಲ್ಲದಿದ್ದರೂ ಗಮನಾರ್ಹ ಹೋಲಿಕೆಗಳಿವೆ "ಕಥನ ರೀತಿಯಲ್ಲಿ ಸಾಂಪ್ರದಾಯಿಕವಾದ ಜಾತಿನಿಷ್ಠ ಸಮಾಜದ ವಿಮರ್ಶೆಯನ್ನು ಮಾಡುವುದಕ್ಕೆ ಒಬ್ಬ ಅಸ್ಪೃಶ್ಯನ ದೃಷ್ಟಿಕೋನವನ್ನು ಆರಿಸಿಕೊಂಡಿರುವುದರಿಂದ ವಸ್ತುವನ್ನು ನಿರ್ವಹಿಸಲು ಈ ಇಬ್ಬರೂ ಲೇಖಕರಿಗೆ ಸಾಧ್ಯವಾಗಿದೆ." ಈ ಎರಡೂ ಕಾದಂಬರಿಗಳ ನಾಯಕರು 'ಬಾಖ' ಮತ್ತು 'ಚೋಮ' ಅನ್‌ಟಚಬಲ್ ಕಾದಂಬರಿಯಲ್ಲಿ 18 ವರ್ಷದ ಬಾಖನ ಜೀವನದ ಒಂದು ದಿನ ಮಾತ್ರ ಚಿತ್ರಿತವಾಗಿದ್ದರೆ, ಚೋಮನ ದುಡಿಯಲ್ಲಿ 55 ವರ್ಷದ 'ಚೋಮನ' ಪ್ರಬುದ್ಧ ಜೀವನ ವಿವರಗಳು ಚಿತ್ರಿತವಾಗಿವೆ. ಇವೆರಡು ಕಾದಂಬರಿಗಳ ಪ್ರಾದೇಶಿಕ ಪರಿಸರ ಬೇರೆ ಬೇರೆಯಾದರೂ, ಆಂತರಿಕ ರೂಪ ಇಲ್ಲಿನ ಸಮಸ್ಯಾತ್ಮಕ ನಾಯಕನ ಕೀಳರಿಮೆ ಮತ್ತು ಅವನ ಅಭಿಲಾಷೆಗಳಿಗೆ ಅಡ್ಡಿಮಾಡುವ ಸಮಕಾಲೀನ ವಾಸ್ತವದ ಘೋಷಣೆಯಿಂದ ಸಿದ್ಧವಾಗುತ್ತದೆ 'ಚೋಮನ ದುಡಿ'ಯ ಪ್ರಸ್ತಾವನೆಯಲ್ಲಿ ಕಾರಂತರು ಹೀಗೆ ಹೇಳುತಾರೆ: "ನಮ್ಮಲ್ಲಿ (ದಕ್ಷಿಣ ಜಿಲ್ಲೆ) ಅಸ್ಪೃಶ್ಯರಾದ ಹೊಲೆಯರ ತಂಡದಲ್ಲಿ ಮೇರ, ಭೈರ, ಅಜಿಲ, ಮಾರಿ ಎಂದು ನಾಲ್ಕಾರು ಬೇರೆ ಬೇರೆ ವಿಭಾಗಗಳಿವೆ. ಅದರಲ್ಲಿ ಮೇರರು ಸಾಗುವಳಿ ಮಾಡಿಕೊಂಡಿರಲು ಸಾಧ್ಯವಿದೆ. ಅಂದರೆ, ತೀರ ಕೆಳಗಿನವರೆಂದು ಎಣಿಸಲ್ಪಡುವ ಮಾರಿಹೊಲೆಯರಿಗೆ ಅಷ್ಟು ಅವಕಾಶವನ್ನು ಸಮಾಜವು ಕೊಡುವುದಿಲ್ಲ. ಅವನ ನೆರಳಿನ ಸ್ಪರ್ಶವೂ ಕೂಡದೆನ್ನುವವರೂ ಇದ್ದಾರೆ. ಉಚ್ಚಿಷ್ಟವನ್ನು ತಿಂದೋ, ಸತ್ತ ಜಾನುವಾರುಗಳನ್ನು ತಿಂದೋ, ಇಲ್ಲವೆ ನಂದನೀಯವಾದ ಇನ್ನಾವ ವಿಧದಿಂದಲೋ ಅವರ ಜೀವನ ಸಾಗಬೇಕು. ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಈ ಜನರನ್ನು ಕೂಲಿಗೂ ಕರೆಯುವುದಿಲ್ಲ. ಆದರೆ ದಕ್ಷಿಣ ಭಾಗಗಳಲ್ಲಿ ಹೊಲಗೆಲಸಗಳಿಗೇನೊ ಕರೆಯುತ್ತಾರೆ. ಅಂಥ ಬಳಗದ ಒಂದು ಜೀವಿಯು ಜೋಮ ಎಂಬ ವಿವರಗಳನ್ನು ಕೃತಿಯ ಮೊದಲಿಗೆ ಸ್ಪಷ್ಟೀಕರಿಸುತ್ತಾರೆ. ಚೋಮನ ದುಡಿಯಲ್ಲಿ ಹೊಲೆಯರ 'ಚೋಮ' ಮತ್ತು 'ಬೆಳ್ಳಿ' ಪ್ರಧಾನ ಪಾತ್ರಗಳು. ಇವರಿಬ್ಬರೂ ಕೂಡ ಸಮಕಾಲೀನ ಸಮಾಜದಲ್ಲಿ ತಮ್ಮ ಜಾತಿಯ ಇತಿಮಿತಿಗಳನ್ನು ಅರಿತವರು. ಈ ಕಾದಂಬರಿಯುದ್ದಕ್ಕೂ ಚೋಮನದು ಒಂದೇ ಒಂದು ಆಸೆ. ಸ್ವಂತ ಭೂಮಿಯಲ್ಲಿ ಬೇಸಾಯಗಾರನಾಗಬೇಕೆಂಬುದು, ಇವನ ಈ ಆಸೆ ತನ್ನ ಮಿತಿಯಿಂದ ಮುಂದೆ ಹೋಗಬೇಕೆಂಬ ಚಪಲವಿಲ್ಲ. ಕೇವಲ ಒಂದು ಹೊತ್ತಿನ ಸರಿಯಾದ ಊಟಕ್ಕೆ ಸಹಾಯಕವಾಗಬೇಕೆಂಬ ದೂರದ ಆಸೆಯಿಂದ. ಅವನೇ ಹೇಳುವಂತೆ ಒಂದು ರೀತಿಯ 'ಭ್ರಮೆ'ಯಿಂದ ಚೋಮ ಸ್ವಂತ ಬೇಸಾಯಗಾರನಾಗಲು ಬಯಸುತ್ತಿರುವುದು ತಮ್ಮ ಮಟ್ಟಕ್ಕೆ ಏರಲು ಎಂದು ನಂಬಿರುವ ರೈತರು ಒಂದು ಕಡೆ; ಸಂಪ್ರದಾಯವನ್ನು ಮುರಿದು

ಹೊಲೆಯರಿಗೆ ಭೂಮಿ ಕೊಡಬಾರದೆಂದು ನಂಬಿರುವ ಸಂಕಪ್ಪಯ್ಯನ ತಾಯಿ ಒಂದು ಕಡೆಗಿದ್ದಾರೆ. ಚೋಮನ ಕುಟುಂಬದಲ್ಲಿ ತಾಯಿ ಸತ್ತ ಐದು ಮಕ್ಕಳು; ಚನಿಯ, ಗುರುವ, ಬೆಳ್ಳಿ, ನೀಲ ಮತ್ತು ಕಾಳ. ಇವರ ಜೊತೆಯಲ್ಲೇ 'ಹೆಂಡ' ಅವನ ಜೀವನದಲ್ಲಿ ಪ್ರಧಾನ ಪೈಪೋಟಿ ನಡೆಸುತ್ತದೆ. ಚೋಮನ ಪ್ರಧಾನ ಸಮಸ್ಯೆಯಾದ ಭೂಮಿಯನ್ನು ದೊರಕಿಸಿಕೊಳ್ಳುವಲ್ಲಿನ ಈ ಸಮಸ್ಯಯನ್ನು ಪರಿಹರಿಸಲು ಬದಲು ಅವನ ಮಕ್ಕಳು ತಾವೇ ಒಂದೊಂದು ಸಮಸ್ಯೆಯನ್ನು ಸೃಷ್ಟಿಸುತ್ತಾ ಹೋಗುತ್ತಾರೆ. ಈ ಎಲ್ಲಾ ಸಮಸ್ಯೆಯ ಪರಿಹಾರಕ್ಕೆ ಒಂದೇ ಒಂದು ಮಾರ್ಗ ಕ್ರೈಸ್ತಮತವನ್ನು ಸೇರುವುದು. ಇಲ್ಲಿ ಗುರುವ ಕ್ರೈಸ್ತ ಮತವನ್ನು ಸೇರಿ ನೆಮ್ಮದಿಯಿಂದ ಬದುಕುತ್ತಾನೆ. ಇದನ್ನು ವಿರೋಧಿಸುತ್ತಿದ್ದ ಚನಿಯ ಸಾಯುತ್ತಾನೆ. ಅನಿವಾರ್ಯವಾಗಿ ಬೆಳ್ಳಿಯೂ ಕೂಡ ಚೋಮನಿಗೆ ಕ್ರೈಸ್ತ ಮತಕ್ಕೆ ಸೇರುವ ಸೂಚನೆಯನ್ನು ಕೊಡುತ್ತಾಳೆ. ಆದರೆ ಪಂಜರ್ಲಿ ಭೂತ 'ಚೋಮ ಮಿಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಬಂದು ಈಗ ಸಾಯುವ ಮೂರು ದಿನಕ್ಕೆ ಮುಂಚೆ, ನನ್ನನ್ನು ಬಿಟ್ಟು ಪಾದ್ರಿಯ ಹಿಂದೆ ಓಡುತ್ತೀಯೋ? (ಚೋಮನ ದುಡಿ, ಪುಟ 109) ಎನ್ನುತ್ತದೆ. ಆ ಆಸೆಯನ್ನು ಚೋಮ ಕೈಬಿಡುತ್ತಾನೆ.

ಚೋಮನ ಕುಟುಂಬದ ವ್ಯವಸ್ಥೆ: 'ಜೋಮನು ಸಂಕಪ್ಪಯ್ಯನವರ ಮೂಲದ ಹೊಲೆಯ ಮೂಲವೆಂದರೆ, ಅವರ ಅನುಮತಿಯಿಲ್ಲದೆ ಇನ್ನೊಬ್ಬ ಧನಿಯ ಆಶ್ರಯವನ್ನು ಲಾಭಕ್ಕಾಗಲಿ, ನಷ್ಟಕ್ಕಾಗಲಿ, ಇವನಾಗಲಿ ಇವನ ಪರಂಪರೆಯವರಾಗಲಿ ಬಿಡುವಂತಿಲ್ಲ. ಇದೊಂದು ವಂಶಪಾರಂಪರ್ಯವಾಗಿ ಬಂದ ಜೀತ. ಅವರ ಧನಿಯಾದರೂ– ಸಾಲವಿರಲಿ, ಮೂಲವಿರಲಿ, ಚೋಮನ ಸಂತತಿಯನ್ನು ನಡೆಸಿಕೊಂಡು ಹೋಗಬೇಕು. ಮನೆಯವರೆಲ್ಲರೂ ಒಟ್ಟಾಗಿ ಶ್ರಮಿಸಿ ದುಡಿದರೆ ಎರಡು ಪಾವು ಅಕ್ಕಿ ಮತ್ತು ಐದು ಪಾವು ಭತ್ತ ದೊರೆಯುತ್ತದೆ. ಒಂದು ಸೇರು ಅಕ್ಕಿಯಲ್ಲಿ ಈ ಆರು ಮುಂದಿಯ ಸಂಸಾರ ಸಾಗಬೇಕು. (ಚೋಮನ ದುಡಿ, ಪು 7) ಇದು ಚೋಮನ ಕುಟುಂಬದ ಚಿತ್ರಣ. ಇದರಿಂದಲೇ ಚೋಮನ ಬಡತನವೆಷ್ಟೆಂಬುದು ನಮಗೆ ಅರ್ಥವಾಗುತ್ತದೆ. ಆದ್ದರಿಂದಲೇ ಚೋಮನಿಗೆ ಭೂಮಿ ಬೇಕಾಗಿರುವುದು ಕೇವಲ ಒಂದು ಹೊತ್ತಿನ ಸರಿಯಾದ ಊಟಕ್ಕಾಗಿ ಮಾತ್ರ.

'ಜೋಮನದುಡಿ'ಯಲ್ಲಿ ಪಾತ್ರಗಳೆಲ್ಲ ವ್ಯವಸ್ಥೆಯ ಕರಾಳ ಕಪಿಮುಷ್ಟಿಗೆ ಸಿಕ್ಕ ನಿಸಹಾಯಕರು. ಚೋಮ, ಕಾಳ, ನೀಲ, ಬೆಳ್ಳಿ, ಕೊನೆಗೆ ಸಂಕಪ್ಪಯ್ಯನೂ ಕೂಡ ಜಾತೀಯತೆ ಅಥವಾ ಗುಲಾಮಗಿರಿಯ ಸೆರೆಯಲ್ಲಿ ಸಿಕ್ಕವರು. ಇವರಿಗೆ ವ್ಯವಸ್ಥೆಯ ಆಚೆಗೆ ಮನಸ್ಸು ಚಾಚುವುದು ಅಸಾಧ್ಯವಾಗುತ್ತದೆ. ಆದ್ದರಿಂದಲೇ ಚೋಮನ ಆಸೆ ಕೇವಲ ಭ್ರಮೆಯಾಗೇ ನಿಲ್ಲುತ್ತದೆ. ಸಂಪ್ರದಾಯದ ಪ್ರಕಾರ ಚೋಮನಿಗೆ ವ್ಯವಸಾಯ ಮಾಡಲು ಅವಕಾಶವಿಲ್ಲ. ಧಣಿ ಸಂಕಪ್ಪಯ್ಯನಿಗೆ ಭೂಮಿ ಕೊಡುವ ಇಷ್ಟವಿದ್ದರೂ ಕೂಡ ಸಂಪ್ರದಾಯಕ್ಕೆ ವಿರೋಧವಾಗಿ ನಡೆಸಿಕೊಳ್ಳಲಾರ. ಏಕೆಂದರೆ ಹೊಲೆಯರು ನೇಗಿಲು ಹಿಡಿದರೆ ಪ್ರಳಯವೇ ಬಂದಿತು' (ಚೋಮನ ದುಡಿ, ಪುಟ 13) ಎಂಬುದು ಮೇಲ್ವರ್ಗದವರು ನಿರ್ಣಯಿಸಿದ ಸಂಪ್ರದಾಯ. ಅದನ್ನು ಉಲ್ಲಂಘಿಸಿ ಚೋಮ ಭೂಮಿ ಕೇಳುತ್ತಾನೆ. ಅದಕ್ಕೆ ಕಾರಣವೂ ಇದೆ. ಯಾವುದೋ ಊರಿನಲ್ಲಿ ಒಟ್ಟು ಹೊಲೆಯ ಸರಕಾರದಿಂದ ಭೂಮಿಯನ್ನು ಪಡೆದು ವ್ಯವಸಾಯ ಮಾಡುತ್ತಿರುತ್ತಾನೆ. ಇದನ್ನು ಕೇಳಿ ಚೋಮನ ಕಿವಿ ನೆಟ್ಟಗಾಗುತ್ತದೆ. ಇದಕ್ಕೆ ಸಹಾಯಕವಾಗುವಂತೆ ಅವನಲ್ಲಿ ಶಕ್ತಿಯಿದೆ. ಕಾಡಿನಲ್ಲಿ ಸಿಕ್ಕ ಎತ್ತುಗಳಿವೆ. ಚೋಮನಿಗೆ ನಿರಾಶೆಯಾದಾಗ ಎರಡು ಮಾರ್ಗಗಳನ್ನು ಅನುಸರಿಸಿ ನೋವನ್ನು ಮರೆಯುತ್ತಾನೆ. ಒಂದು ಬಿರುಮನ ಅಂಗಡಿಯ 'ಹೆಂಡ' ಕುಡಯುವುದು, ಮತ್ತೊಂದು ಕಡೆ 'ದುಡಿ' ಬಾರಿಸುವುದು, ಹಾಡುವುದು. ಒಟ್ಟಿನಲ್ಲಿ 'ಶಿವನ ಕೈಯಲ್ಲಿ ಡಮರು ಇದ್ದಂತೆ ಚೋಮನ ಕೈಯಲ್ಲಿ ಈ ದುಡಿ', (ಚೋಮನ ದುಡಿ, ಪು 8)

ಚೋಮನು ಹೊಲೆಯರ ಮನೆಯಲ್ಲಿ ಹುಟ್ಟಿರುವುದರಿಂದ ಆ ಜಾತಿ ಕಟ್ಟಳೆಗೆ ಮಿರಿದ ಯಾವ ಆಶೈಕೆಗಳನ್ನು ಕಲ್ಪನೆಯಲ್ಲಿಯೂ ಸಹ ಮಾಡಲಸಾಧ್ಯ. ಸಂಕಪ್ಪಯ್ಯ ಚೋಮನಿಗೆ ಹಾಳುಬಿದ್ದ ಒಂದು ಹೊಲದ ಚೂರನ್ನು ಕೊಡಬಹುದೆಂಬ ಉದ್ದೇಶವಿದ್ದರೂ ತನ್ನ ಮುದಿ ತಾಯಿಯನ್ನು ಅಸಮಾಧಾನ ಪಡಿಸಲು ಇಷ್ಟವಿರಲಿಲ್ಲ. ಕೊನೆಗೆ ಚೋಮನ ಬೇಡಿಕೆಯನ್ನು ನಿರಾಕರಿಸಬೇಕಾಯಿತು. ಇದರಿಂದ ಕೋಪಗೊಂಡ ಚೋಮ ಕ್ರಿಶ್ಚಿಯನ್ ಪಾದ್ರಿಯ ಬಳಿ ಹೋಗಿ ಭೂಮಿ ಕೇಳುತ್ತಾನೆ. ಅವನು ಕೊಡಲು ಸಿದ್ಧನಿದ್ದನು ಆದರೆ ಗದ್ದೆಗಳೆಲ್ಲ "ಇಗರ್ಜಿಯ ಆಸ್ತಿ, ನಮ್ಮ ಜಾತಿಯವರಿಗೆ ಅಲ್ಲದೆ ಇತರರಿಗೆ ಗೇಣಿಗೆ ಕೊಡಲು ಬರುವುದಿಲ್ಲ" (ಚೋಮನ ದುಡಿ, ಪು 48) ಎನ್ನುತ್ತಾನೆ. ಚೋಮನಿಗೆ ಹಿಂದೂ ಮತವನ್ನು ಬಿಟ್ಟು ಕ್ರೈಸ್ತ ಮತವನ್ನು ಒಪ್ಪಿಕೊಳ್ಳಲು ಇಷ್ಟವಿಲ್ಲದೆ ಹಿಂತಿರುಗುತ್ತಾನೆ. ತನ್ನ ಎರಡನೆಯ ಮಗ ಬೇಸಾಯಗಾರನಾದರೂ ಮತವನ್ನು ಬಿಟ್ಟನೆಂದು ಅವನಿಗೆ ಕೋಪವೂ ಉಂಟಾಗುತ್ತದೆ. ಆದ್ದರಿಂದಲೇ ಈ ಕಾದಂಬರಿಯಲ್ಲಿ ಎರಡು ವಿಷಯಗಳು ಮಹತ್ವದ್ದಾಗಿ ಕಾಣುತ್ತವೆ. ಒಂದು ಹಿಂದೂ ಸಮಾಜದಲ್ಲಿನ ಹರಿಜನ ಸಮಸ್ಯೆ,

ಮತ್ತೊಂದು ಕ್ರಿಶ್ಚಿಯನ್ ಧರ್ಮದ ಅನುಷ್ಠಾನ. ಒಂದರಲ್ಲಿ ಮೇಲ್ವರ್ಗದವರ ಶೋಷಣೆಯಿದ್ದರೆ ಇನ್ನೊಂದರಲ್ಲಿ ಶೋಷಿತರನ್ನು ಸಮಾನತೆಯ ಹೆಸರಿನಲ್ಲಿ ದುರುಪಯೋಗಪಡಿಸಿಕೊಳ್ಳುವುದನ್ನು ಕಾಣುತ್ತೇವೆ. ಹೊಲೆಯನಾಗಿ ಹುಟ್ಟಿದ್ದರಿಂದ ತಾನೇ ಸ್ವಂತ ಸಾಗುವಳಿ ಮಾಡಲು ಸಾಧ್ಯವಿಲ್ಲದ ಚೋಮ ತನ್ನ ಬದುಕಿನಲ್ಲಿ ತಾನೇ ಬೆಳೆಯಬೇಕೆಂಬ ಆಸೆಯನ್ನು ಕಟ್ಟಿಕೊಂಡು ಅದರ ವಿಫಲತೆಯಲ್ಲಿ ಸಾಯುತ್ತಾನೆ. ಈ ವಸುವನ್ನಾಧರಿಸಿದ ಚೋಮನ ದುಡಿಯಲ್ಲಿ ಮುಖ್ಯವಾಗಿ ಎರಡು ಸಮಸ್ಯೆಗಳು ಇರುವುದನ್ನು ಕೆ.ವಿ. ನಾರಾಯಣ ಅವರು ಗುರುತಿಸಿದ್ದಾರೆ.

1. 'ಸಾಮಾಜಿಕವಾದದ್ದು' ಉದಾಹರಣೆಗೆ: ಹೆಂಡ, ಸಾಲ, ವಸತಿ, ಕೂಲಿ, ನಂಬಿಕೆ, ಜೀವನೋತ್ಸಾಹ... ಇತ್ಯಾದಿಗಳು ಸಾಮಾಜಿಕವಾದವುಗಳು.
2. ವೈಯಕ್ತಿಕ: ದುಡಿ, ಸಾವು– ಇವು ವ್ಯಕ್ತಿಗೆ ಮಾತ್ರ ಸೇರಿದವು, ಎಂದರೆ "ಚೋಮನ ಬದುಕಿನ ದುರಂತ. ಒಂದು ಸಾಮಾಜಿಕ ದುರಂತವೂ ಹೌದು, ವ್ಯಕ್ತಿಯೊಬ್ಬನ ದುರಂತವೂ ಹೌದು"

ಈ ಕಾದಂಬರಿಯ ಪ್ರಮುಖ ಸಾಮಾಜಿಕ ಸಮಸ್ಯೆಯಾದ ಅಸ್ಪೃಶ್ಯತೆಯ ಸಮಸ್ಯೆಯನ್ನು ಸಂಪೂರ್ಣವಾಗಿ ಚೋಮ ಪ್ರತಿನಿಧಿಸಲಾರ, ಏಕೆಂದರೆ ಚೋಮನ ವೈಯಕ್ತಿಕ ಅಂಶಗಳೇ ಇಲ್ಲಿ ಹೆಚ್ಚಿನ ಪ್ರಧಾನ. ಚನಿಯನ ಸಾವು, ಗುರುವನ ಮತಾಂತರ ಮತ್ತು ಬೆಳ್ಳಿಯ ಜಾರಿದ ಬದುಕು ಇವುಗಳು ಸಂಪೂರ್ಣವಾಗಿ ಚೋಮನಿಗೆ ಸಂಬಂಧಪಟ್ಟವುಗಳಷ್ಟೇ ಅಲ್ಲ, ಅವನ ಮೇಲೆ ಆಕಾಶವೇ ಕಳಚಿ ಬಿದ್ದಿತೇನೋ ಎನ್ನುವಷ್ಟು ಪರಿಣಾಮವನ್ನುಂಟು ಮಾಡಿದಂತಹವುಗಳು. ಆದುದರಿಂದಲೇ ಈ ಮೇಲೆ ಹೇಳಿದ ಅಂಶಗಳು ಯಾವವೂ ಸಮಾಜದ ಮೇಲೆ ಯಾವ ರೀತಿಯ ಪರಿಣಾಮವನ್ನುಂಟು ಮಾಡುವುದಿಲ್ಲ.

ಸಾಮಾಜಿಕ ವ್ಯಾಪ್ತಿಯುಳ್ಳ ಈ ಸಮಸ್ಯೆ ವ್ಯಕ್ತಿಯ ಮಟ್ಟಕ್ಕೆ ಇಳಿದಿರುವುದಕ್ಕೆ ಮುಖ್ಯ ಕಾರಣ ಕಾದಂಬರಿಕಾರ ಸಮಸ್ಯೆಗೆ ಹೊರಗಿನವನಲ್ಲದೇ ಭಾರತೀಯ ಜಾತಿವ್ಯವಸ್ಥೆಯ ಮೇಲ್ವರ್ಗಕ್ಕೆ ಸೇರಿದವನು. ಆದ್ದರಿಂದಲೇ ಲೇಖಕರಿಗೆ ಹರಿಜನ ಸಮಸ್ಯೆ ಬಗೆಗೆ ಪೂರ್ಣ ಅನುಭವವಿಲ್ಲ. "ಭೂರ್ಜ್ವಾ ಕಾದಂಬರಿಕಾರರು ಶ್ರಮಜೀವಿ ವರ್ಗ ಪ್ರಜ್ಞೆಯನ್ನು ಬೆಳಸಿಕೊಳ್ಳದೆ ಇಂತಹ ವಸ್ತುವನ್ನು ಆರಿಸಿಕೊಂಡದ್ದು ಈ ಗೊಂದಲಕ್ಕೆ ಕಾರಣವಾಗಿದೆ. ಹೀಗೆ ಒಂದು ವರ್ಗದ ಬರಹಗಾರ ತನ್ನದಲ್ಲದ ವರ್ಗಪ್ರಜ್ಞೆಯನ್ನು ಬೆಳಸಿಕೊಳ್ಳದೆ ಆ ವರ್ಗದ ಸಮಸ್ಯೆಯನ್ನು ಎತ್ತಿಕೊಂಡಾಗ

1. ಆ ಸಮಸ್ಯೆಯನ್ನು ತನ್ನ ಪ್ರಜ್ಞೆಯಿಂದ ನೋಡಿ ಗೊಂದಲ ತರುತ್ತಾರೆ.
2. ಪ್ರತಿಗಾಮಿ ಮನೋಧರ್ಮವನ್ನು ವ್ಯಕ್ತಪಡಿಸುತ್ತಾರೆ"

ಈ ಕಾದಂಬರಿಯಲ್ಲಿ 'ಅಸ್ಪೃಶ್ಯತೆಯ' ಪರಿಕಲ್ಪನೆ ಅಂದರೆ, ಸ್ಪರ್ಶ ಸಂಬಂಧಿಯಾದುದು. ಅಷ್ಟಾಗಿ ಪ್ರಧಾನ ಪಾತ್ರವಹಿಸುವುದಿಲ್ಲ. ಹೊಲೆಯರನ್ನು ಮುಟ್ಟಿಸಿಕೊಳ್ಳಬಾರದು ಎನ್ನುತ ಮಾತು ಬರುವುದು ನೀಲನ ಸಾವಿನ ಸಂದರ್ಭದಲ್ಲಿ ಮಾತ್ರ. ಚೋಮನ ಕಿರಿಯ ಮಗ ನೀಲ ಈಜಲು ಹೋಗಿ, ನೀರಲ್ಲಿ ಮುಳುಗಿ ಸಾಯುತ್ತಾನೆ. ಅವನು ಸಾಯುತ್ತಿರುವುದನ್ನು ದಡದಲ್ಲಿ ನಿಂತು ಹಲವರು ನೋಡುತ್ತಾರಾದರೂ ಅವನು ಅಸ್ಪೃಶ್ಯನೆಂದು ಯಾರೂ ಅವನನ್ನು ಉಳಿಸುವ ಪ್ರಯತ್ನ ಮಾಡುವುದಿಲ್ಲ. ಒಬ್ಬ ಬ್ರಾಹ್ಮಣರ ತರುಣ ನೀಲನನ್ನು ಎಳೆದು ತರಲು ಧಾವಿಸುತ್ತಾನಾದರೂ ಅವನ ಹಿರಿಯರು ಅವನನ್ನು ತಡೆಯುತ್ತಾರೆ. ಚೋಮ ಈಜು ಬಾರದುದರಿಂದ ಬೊಬ್ಬಿಡುತ್ತಾನೆ. ಎಲ್ಲರ ಕಣ್ಣೆದುರಿಗೇನೆ ಈ ಬಾಲಕ ನೋಡು ನೋಡುತ್ತಿದ್ದಂತೆ ಪ್ರವಾಹದಲ್ಲಿ ಮುಳುಗುತ್ತಾನೆ. ಚೋಮನ ಬೊಬ್ಬೆ ಕೇಳಿ ತಡೆಯಲಾರದ್ದಕ್ಕೆ ಬ್ರಾಹ್ಮಣ ತರುಣ ನೀರಲ್ಲಿ ಧುಮುಕಿ ನೀಲನನ್ನು ಹೊರಕ್ಕೆ ತರುತ್ತಾನೆ. ಆದರೆ ನೀಲನ ಪ್ರಾಣ ಇರುವುದಿಲ್ಲ. ಆ ತರುಣ ತಲೆ ತಗ್ಗಿಸಿಕೊಂಡು ಅಲ್ಲಿಂದ ಹೊರಟು ಹೋಗುತ್ತಾನೆ. ಕಾರಂತರು ಈ ಸಂದರ್ಭವನ್ನು ಇಲ್ಲಿ ಕಟ್ಟಿಕೊಡುವುದರ ಮೂಲಕ ಅಸ್ಪೃಶ್ಯತೆಯ ಆಚರಣೆ ಎಷ್ಟೊಂದು ಕ್ರೂರವೆಂಬುದನ್ನು ಮನಗಾಣಿಸುತ್ತಲೇ ವ್ಯವಸ್ಥೆಯ ಈ ಕ್ರೌರ್ಯಕ್ಕೆ ದಲಿತರು ಹೇಗೆ ಬಲಿಪಶುಗಳಾಗುತ್ತಾರೆ ಎಂಬುದನ್ನು ಒಟ್ಟಿಗೆ ಧ್ವನಿಸುತ್ತಾರೆ. ಚೋಮ ಶವವನ್ನು ಮನೆಗೆ ತಂದು ಕದ ಮರೆಮಾಡಿಕೊಂಡು ಒಳಗೆ ಕುಳಿತುಕೊಳ್ಳುತ್ತಾನೆ. ಜನ ಶವವನ್ನು ನೋಡಲು ಮನೆಗೆ ಬಂದಾಗ, ಚೋಮ ಅವರೆದುರಿಗೆ ಅಳುವುದಿಲ್ಲ; ಎದ್ದು ಹೊರಗೆ ಬರುವುದಿಲ್ಲ. ಈ ಸಮಾಜದ ವರ್ತನೆ, ಅಸ್ಪೃಶ್ಯತೆಯ ಕ್ರೂರ ಆಚರಣೆ ಮಗ ಸತ್ತ ದುಃಖಕ್ಕಿಂತ ಹೆಚ್ಚು ಅವನನ್ನು ಇರಿಯುತ್ತದೆ. ಅಸ್ಪೃಶ್ಯತೆಯ ನೋವು ಸಾವಿಗಿಂತಲೂ ಭೀಕರವಾದುದೆಂಬುದು ಇದರಿಂದ ಸ್ಪಷ್ಟವಾಗುತದೆ. ಚೋಮ 'ಹೊಲೆಯನ ಕುಲ ದೇವರಿಗೂ ಬೇಡವಾದ ಕುಲ' ವೆನ್ನುವುದು ಈ ಕಾರಣಕ್ಕಾಗಿಯೇ ಚೋಮನ ಅಂತರಂಗದ ದುಃಖ

ಮಾತಿಗೆ ಮೀರಿದ್ದರಿಂದ ‘ದುಡಿ’ ಬಾರಿಸುವುದರ ಮೂಲಕ ಅದನ್ನು ಮರೆಯಲು ಪ್ರಯತ್ನಿಸುತ್ತಾನೆ. ಚೋಮನ ಮಗಳು ಬೆಳ್ಳಿಯನ್ನು ಮನ್ವೇಲನಂಥವರು ಸೂಳೆಯಾಗಿಸಿಕೊಳ್ಳುವಲ್ಲಿ ಆರ್ಥಿಕ ಕಾರಣಗಳ ಜೊತೆಗೆ ಅವಳೊಬ್ಬ ‘ಅಸ್ಪೃಶ್ಯಳು’ ಎಂಬುದು ಒಂದು ಕಾರಣವಾಗಿರುವಂತೆ ತೋರುತ್ತದೆ.

ಭಾರತೀಯ ಜಾತಿ ವ್ಯವಸ್ಥೆಯನ್ನು ಚೋಮ ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾನೆ. ಜೊತೆಗೆ ತನ್ನ ಜಾತಿ ಕೀಳು ಎನ್ನುವ ಅರಿವೂ ಅವನಿಗಿದೆ. ಆದ್ದರಿಂದಲೇ ತಾನು ಬೇಸಾಯಗಾರನಾಗುವುದು ಅಸಾಧ್ಯವೆಂದು ತಿಳಿಯುತ್ತಾನೆ. ಜಾತಿ ವ್ಯವಸ್ಥೆಯ ಈ ಹಿಡಿತಕ್ಕೆ ಸಿಕ್ಕ ಚೋಮ ಅದರ ಭೀಕರತೆಯನ್ನು ಅನುಭವಿಸುತ್ತಾನೆ. “ನನ್ನಂಥವರನ್ನು ಈ ದೇವರು ಹುಟ್ಟಿಸಬೇಕೇಕೆ? ಹೀಗೆ ಪ್ರಾಣವನ್ನು ಹಿಂಡಬೇಕೇಕ? ಎಂದುಕೊಳ್ಳುತಾನೆ. (ಚೋಮನ ದುಡಿ, ಪು.105). ಆದ್ದರಿಂದಲೇ ಚೋಮ ಹಿಂದೂ ಮತವನ್ನು ಬಿಟ್ಟು ಕ್ರೈಸ್ತ ಮತವನ್ನು ಅವಲಂಬಿಸಬೇಕೆಂದು ತೀರ್ಮಾನಿಸುತ್ತಾನೆ. ಆದರೆ ಅವನ ನಂಬಿಕೆಯ ಸೆಳತವೇ ಮೇಲುಗೈಯಾಗುತ್ತದೆ. ಇಲ್ಲಿ ಕಾದಂಬರಿಕಾರರು ‘ಪಂಜರ್ಲಿ’ ಭೂತದ ಮರೆಯಲ್ಲಿ ನಿಂತು ವರ್ಗ ಹಿತಾಸಕ್ತಿಯನ್ನು ರಕ್ಷಿಸುವಂತೆ ಭಾಸವಾಗುತ್ತ ಜೊತೆಗೆ ಹಿಂದೂ ಧರ್ಮದ ಮೌಢ್ಯತೆಯನ್ನು ತುಂಬುವ ಮೂಲಕ ಮತಾಂತರವನ್ನು ತಡೆಯುವ ಹುನ್ನಾರವು ಇದೆ. ಏಕೆಂದರೆ “ಹೊಲೆಯನ ಮನಸ್ಸನ್ನು ಬೆಳೆಯಿಸುವುದು ಕಾದಂಬರಿಯಲ್ಲಿ ನಡೆದಿಲ್ಲ. ಸ್ವಂತ ಬೇಸಾಯಗಾರನಾಗಬೇಕೆಂಬ ಅವನ ಆಸೆ ಪ್ರೇರಣಾತ್ಮಕವಾಗಿದೆ, ಪ್ರಜ್ಞಾಪೂರ್ವಕವಾಗಿಲ್ಲ.” ಈ ದೃಷ್ಟಿಯಿಂದ ‘ಚೋಮನದುಡಿ’ ತೀರ ಸೀಮಿತ ಕೃತಿಯಾಗಿ ಕಾಣುತ್ತದೆ ಎಂಬುದಾಗಿ ಭಗವಾನ್ ಅಭಿಪ್ರಾಯ ಪಡುತ್ತಾರೆ.

ಚೋಮನಿಗೆ ಅಷ್ಟು ಮಕ್ಕಳಿದ್ದು ಅವನಿಗೆ ಅವರ ಬಗೆಗಿನ ಯಾವ ಯೋಚನೆಯೂ ಇಲ್ಲದೆ ಹೆಂಡ ಕುಡಿದು ಮೈಮರೆಯುವುದನ್ನು ನೋಡಿದಾಗ ಒಬ್ಬ ಹೊಲೆಯನ ಗುಣವೇ ಇಂಥದ್ದು ಎನ್ನುವ ಧ್ವನಿಯನ್ನು ಈ ಕಾದಂಬರಿ ಪ್ರಕಟಿಸುತ್ತದೆಯೇ? ಅಥವಾ ಕಾದಂಬರಿಕಾರರು ಚೋಮನಿಗೆ ಭೂಮಿಯನ್ನು ದೊರಕಿಸಿಕೊಟ್ಟು ಅವನ ಬೆಳವಣಿಗೆಯನ್ನು ಗುರುತಿಸಿದ್ದರಾಗುತ್ತಿರಲಿಲ್ಲವೇ? ಎಂಬ ಚರ್ಚೆಗಳು ಉದ್ಭವಿಸುತ್ತವೆ. ಒಟ್ಟನಲ್ಲಿ “ಹೊಲೆಯ ತನ್ನ ಹುಟ್ಟಿನ ಮಿತಿಗಳಲ್ಲಿ ಮೀರಲು ಹೋಗುವುದರಿಂದ ನೋವನ್ನು ಅನುಭವಿಸುತ್ತಾನೆ. ಆದ್ದರಿಂದ ತನ್ನ ಮಿತಿಗಳಲ್ಲಿ ಬದುಕಬೇಕು’. . . ಎಂದು ಕಾದಂಬರಿ ತನಗೆ ಗೊತ್ತಿಲ್ಲದೆ ಹೇಳುತ್ತದೆ” ಎಂಬ ಕೆ.ವಿ. ನಾರಾಯಣ ಅವರ ಅಭಿಪ್ರಾಯವು ಈ ಕಾದಂಬರಿಯ ಒಟ್ಟಾರೆ ಚೋಮನ ದುಡಿ ನವೋದಯ ಸಂದರ್ಭದಲ್ಲಿನ ಅಸ್ಪೃಶ್ಯತೆಯ ಒಂದು ಮಾದರಿಯನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ ಎನ್ನಬಹುದು.